ಹೇಗಿದೆ? ಇವರ ಕರ್ತವ್ಯಗಳು ಏನು ಎನ್ನುವುದನ್ನು ಬಹಳ ಸಷ್ಟವಾಗಿ ಉತ್ತರದಲ್ಲಿ ಮಾನ್ಯ ಮಂತ್ರಿಯವರು ಹೇಳಬೇಕೆಂದು ನನ್ನ ವಿನಂತಿ ಇದೆ. ಇವರ Actನಲ್ಲಿ ಸುಮಾರು 5, 6, 7, Actಗಳಿವೆ. Karnataka Forest Act, Karnataka Preservation of Trees Act, Wild Life Act, Central Forest Conservation Act, Karnataka Forest Rules....

ಶ್ರೀ ವೈ.ಎಸ್.ವಿ. ದತ್ತಾ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ. ನಮಗೆ ಅವರಿಂದ ಹೇಳಿಕೆ ಕೊಡಿಸಿ. ಏಕೆಂದರೆ ಅದು ಆಗಿಬಿಟ್ಟರೆ, ಚರ್ಚೆ ಸುಗುಮವಾಗಿ ಹೋಗುತ್ತದೆ.

ಅಧ್ಯಕ್ಷರು:– ಸ್ವಲ್ಪ ತಾಳಿ. ಏಕೆ ಗಡಿಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲ ಕಾಯಿದೆಗಳನ್ನು ಇಟ್ಟುಕೊಂಡು ಇವರ ಇಲಾಖೆಯ ಮುಖ್ಯ ಜವಾಬ್ದಾರಿಗಳು ಈ ಕೆಳಕಂಡಂತೆ ಇವೆ. ಇವರದ್ದು ಮೊದಲನೆಯ ಜವಾಬ್ದಾರಿ ಕಳ್ಳ ಸಾಗಾಣಿಕೆ, ಬೇಟೆಯಾಡುವಿಕೆ, ಬೆಂಕಿ ಸಂರಕ್ಷಣೆ ಮತ್ತು ಇತರ ಕಾರಣಗಳಿಂದ ಈಗ ಇರುವ ಸಸ್ಸ ಮತ್ತು ವನ್ಯ ಜೀವಿಗಳ ಸಂರಕ್ಷಣೆ.

6. ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ

ವಿಷಯ:– ಇಂಧನ ಇಲಾಖೆ ಕುರಿತಂತೆ ಸದನ ಸಮಿತಿ ಮಾಡುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆ ಮೇಲೆ ಚರ್ಚೆ ನಡೆಯುವಾಗ ಜೆ.ಡಿ.ಎಸ್.ನ ನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಒಂದು ಸಲಹೆಯನ್ನು ಮಾಡಿದ್ದರು. ಆಮೇಲೆ ಅವರು ಒತ್ತಾಯದ ರೂಪ ತಳೆದಿದ್ದರು. ಇಂಧನ ಇಲಾಖೆಯಲ್ಲಿ ವಿದ್ಯುತ್ ಅನ್ನು ಖರೀದಿ ಮಾಡಿರತಕ್ಕಂಥದ್ದು, ವಿದ್ಯುತ್‌ನ ಅಗತ್ಯತೆ, ಉತ್ಪತ್ತಿ, ಇವೆಲ್ಲದರ ಬಗ್ಗೆ ಒಂದು ಸದನ ಸಮಿತಿ ಮಾಡಬೇಕೆಂದು ಒತ್ತಾಯ ಮಾಡಿದ್ದಾರೆ. ಆಮೇಲೆ terms of reference ಏನು ಮಾಡಬೇಕೆಂಬುದನ್ನು ಸರ್ಕಾರ ಮಾಡುತ್ತದೆ. ಈಗ ನನಗೆ ಬಹಳ ಮುಖ್ಯವಾಗಿ ಬಹುಶಃ ಮಾನ್ಯ

ಜಗದೀಶ್ ಶೆಟ್ಟರ್‌ರವರು ಕೂಡ ಅದಕ್ಕೆ ವಿರೋಧ ಇಲ್ಲವೆಂದು ಅವರೂ ಕೂಡ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಒಂದು condition ಮೇಲೆ ಎಂದು ನಾನು ಹೇಳಿದ್ದು. ಅವರು ಹೇಳಿದ ಹಾಗೆ 15–20 ಥಿಜಚಿಥಿ ವರೆಗಿನದ್ದು ಕೂಡ ಆಗಬೇಕೆನ್ನುವುದನ್ನು ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ:– 15–20 years ಎಂದು ಅವರು ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಅವರು demand ಮೇಲೆ ಮಾತನಾಡಿದಾಗ ಹೇಳಿದ್ದಾರೆ. ಅದು record ನಲ್ಲಿದೆ. ಅವರು ಮಾತನಾಡುವಾಗ ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅದರಿಂದ ಏನೂ ಆಗುವುದಿಲ್ಲ, 15–20 years ನಿಂದ ಆಗಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಅದೂ ಒಂದು condition ನಮ್ಮದು ಇದೆ. ನಾನು ಏನು ಹೇಳಿದೆ ಎಂದರೆ,

(ಗೊಂದಲ)

ಶ್ರೀ ಸಿದ್ದರಾಮಯ್ಯ:– 15–20 years ನಿಂದ ಅದನ್ನು ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, 15–20 ವರ್ಷಗಳದ್ದು ಯಾರಾದರೂ ಮಾಡುತ್ತಾರೆಯೇ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಕಳೆದ 10 years ನದ್ದು ಸದನ ಸಮಿತಿ ಮೂಲಕ enquiry ಮಾಡಿಸಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– 15 years ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. 15 ವರ್ಷದಿಂದ ಮಾಡಿಸಿ. ಬೇಡ ಎಂದು ಯಾರು ಹೇಳಿದರು?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಕುಮಾರಸ್ವಾಮಿಯವರು ಮಾತನಾಡುತ್ತಾ 15 ವರ್ಷಗಳಿಂದ ಮಾಡಿ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಈಗ ನೀವು ಈ ಸದನ ಸಮಿತಿಗೆ ಒಪ್ಪಿಕೊಳ್ಳುತ್ತೀರೋ ಇಲ್ಲವೋ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಕುಮಾರಸ್ವಾಮಿಯವರು ಮಾತನಾಡುವಾಗ ಹೇಳಿದರು.

ಶ್ರೀ ಸಿದ್ದರಾಮಯ್ಯ:– ಏಕೆ ಹಿಂದೇಟು ಹೊಡೆಯುತ್ತಿದ್ದೀರಿ? ಇಲ್ಲ, ಇಲ್ಲ, 15 ವರ್ಷಗಳಿಂದ ಮಾಡುವುದಕ್ಕೆ ನಾವು ತಯಾರಾಗಿಲ್ಲ. 2006–07ರಿಂದ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– Avoid ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– Avoid ಏಕೆ ಮಾಡುತ್ತಿದ್ದೇವೆ? ಸದನ ಸಮಿತಿ ಮಾಡುವ ಅಗತ್ಯವೇ ಇಲ್ಲ. ಆದರೂ ಕೂಡ ನೀವು ಒತ್ತಾಯ ಮಾಡುತ್ತಿರುವುದರಿಂದ ನಾನು ಒಪ್ಪಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಆದ್ದರಿಂದ 2006–07ರಿಂದ ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅದನ್ನೂ ಕೂಡ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ಮಾಡುತ್ತೇವೆ. Term and reference ಅನ್ನು ಮೇಲೆ ಆಮೇಲೆ announce ಮಾಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಹಾಗಾದರೆ ನಾವು ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಕಾಂಗ್ರಸ್ government ಮಾಡಿದ್ದನ್ನು ಮುಚ್ಚಿಕೊಳ್ಳಬೇಕೆಂದು ಇವರು ಮಾಡುತ್ತಿದ್ದಾರೆ. ಇಲ್ಲದಿದ್ದರೆ 15 ವರ್ಷಗಳಿಂದ ಮಾಡಿ ಎಂದು ಏನು ಕೇಳುತ್ತಿದ್ದೇವೆ ಅದನ್ನು ಮಾಡಿ.

ಶ್ರೀ ಸಿದ್ದರಾಮಯ್ಯ:– ಏಕೆ? ನೀವು ತಪ್ಪು ಮಾಡಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್:– ನಾವು ಮಾಡಿಲ್ಲ. ನೀವು ಮಾಡಿದ್ದೀರಾ? ನೀವು ಮಾಡಿಲ್ಲವೆಂದು 15 ವರ್ಷಗಳಿಂದ ತನಿಖೆ ಮಾಡುವುದಕ್ಕೆ ಆದೇಶ ಕೊಡಿ.

ಶ್ರೀ ಸಿದ್ದರಾಮಯ್ಯ:– ಯಾರಾದರೂ 15 ವರ್ಷಗಳಿಂದ ಮಾಡುತ್ತಾರೆಯೇ? ನೀವು ವಿರೋಧ ಪಕ್ಷದಲ್ಲಿದ್ದಾಗ ಮಾಡಿ ಎಂದು ಕೇಳಿಯ ಇಲ್ಲ. ನೀವು ವಿರೋಧ ಪಕ್ಷದಲ್ಲಿದ್ದೀರಲ್ಲ. ಆಗ ನೀವು ಕೇಳಿದ್ದೀರಾ? ಆಗ ಕೇಳಿಲ್ಲ. ಈಗ ಏಕೆ ಕೇಳುತ್ತಿದ್ದೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಸಭಾಧ್ಯಕ್ಷರೆ, ಇವರು ವಿರೋಧ ಪಕ್ಷದಲ್ಲಿದ್ದಾಗ ಕೇಳಬಹುದಿತ್ತಲ್ಲ?

ಶ್ರೀ ಜಗದೀಶ್ ಶೆಟ್ಟರ್:– ಕೇಳಿದ್ದೇವೆ ನಾವು. ಆವಾಗ ಅದು ಚರ್ಚೆಯಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಈಗ ಅವರು ಕೇಳಿದ ಮೇಲೆ 2006–07ರಿಂದ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಸ್ಪಷ್ಟನೆ ಮಾಡಲಿ. ಇಲ್ಲವೆಂದರೆ ನಾವು ಧರಣಿ ಕೂರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಎಲ್ಲರೂ ಎದ್ದು ನಿಲ್ಲುತ್ತಾರಲ್ಲಪ್ಪ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾವು ತಯಾರಾಗಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– CBI enquiry ಆಗಲಿ, ಲೋಕಾಯುಕ್ತ enquiry ಆಗಲಿ ನ್ಯಾಯಾಂಗ ತನಿಖೆಯಾಗಲಿ ಎಲ್ಲದಕ್ಕೂ ready ಇದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಆದರೆ, 15–20 ವರ್ಷದ್ದು ಎಂದು ನಾವು demand ಮಾಡಿದ್ದು. ಅದಕ್ಕೆ ನೀವು ತಯಾರಾದರೆ ಅಡ್ಡಿ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಆಗ ವಿರೋಧ ಪಕ್ಷದಲ್ಲಿ ನೀವೇ ಇರಲಿಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಕೇಳಲಿಲ್ಲ, ಮಾಡಲಿಲ್ಲ. ಆಗ ಸುಮ್ಮನಿದ್ದಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನೀವೆಲ್ಲ ಟಚಿಣಛಿ ಜಿಥುಟಿರ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಲ್ಲವೆಂದರೆ ಇವರು ಏನೋ ಮಾಡುವುದಕ್ಕೆ ಸದನ ಸಮಿತಿ ಮಾಡುತ್ತಿದ್ದಾರೆ ಎನ್ನುವಂಥ ತಪ್ಪು ಅಭಿಪ್ರಾಯ ಬರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅವರು ಸ್ಪಷ್ಟನೆ ಮಾಡದಿದ್ದರೆ ನಾವು wellಗೆ ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– 2006–07ರಿಂದ ಎಂದು ಸರ್ಕಾರ ಘೋಷಿಸುತ್ತಿರುವುದು ಸರಿ ಅಲ್ಲ.

(ಗೊಂದಲ)

ಅಧ್ಯಕ್ಷರು:– ನೋಡಿ ನಾನು ಸದನವನ್ನು ನಡೆಸಲೇಬೇಕು.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– Match fixing ಮಾಡುವುದು ಬೇಡ ಸಾರ್.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಇವರು match fix ಮಾಡಬಾರದು.

(ಗೊಂದಲ)

ಅಧ್ಯಕ್ಷರು:– ನನ್ನ ಕೊಠಡಿಯಲ್ಲಾದ ಚರ್ಚೆಯ ಹಿನ್ನೆಲೆಯಲ್ಲಿ ಅಧಿಕೃತವಾದಂಥ ಘೋಷಣೆ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಿಮಗೆ ಇನ್ನೊಂದು ಏನು ಹೇಳುತ್ತೇನೆಂದರೆ, 2006–07 ಕ್ಕಿಂತ ಹಿಂದೆ power purchase ಮಾಡಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– Power purchase ಒಂದೇ ಅಲ್ಲ, material purchase ಕೂಡ ಇದೆಯಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಇವರೇ ವಿರೋಧ ಪಕ್ಷದಲ್ಲಿದ್ದರು. ಆಗೇನೂ ಕೇಳಲಿಲ್ಲ. ಈ ಇವರು 2006–07ರಿಂದ ಅಧಿಕಾರದಲ್ಲಿದ್ದರಲ್ಲ, ಈಗ ಭಯ ಹತ್ತಿಕೊಂಡು ಈ ತರಹ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾವು 2006–07ರಿಂದ ಮಾಡುವುದನ್ನು ಒಪ್ಪಿಕೊಂಡರೆ ಒಪ್ಪಿಕೊಳ್ಳಿ, ಒಪ್ಪಿಕೊಳ್ಳದಿದ್ದರೆ.....

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಇದರಲ್ಲಿ power purchase ಅಷ್ಟೇ ಅಲ್ಲ. Power ಇಲಾಖೆಗೆ ಸಂಬಂಧಪಟ್ಟಂಥ ಸಾಕಷ್ಟು ವಿಷಯಗಳು ಇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಎಲ್ಲಾ ಆಗಲಿ ಎಂದರೆ ಎಲ್ಲಾ ಆಗಲಿ. Coal purchase, power purchase, ಎಲ್ಲಾ ಆಗಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– 2006–07ರಿಂದ ಏಕೆ ನಿಮಗೆ ಭಯ?

(ಗೊಂದಲ)

ಶ್ರೀ ಸಿದ್ದರಾಮಯ್ಯ:–ಆಗ ನಾವು ಅಧಿಕಾರದಲ್ಲಿ ಇರಲೇ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– I was not in power.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾನೇಕೆ ಹೆದರಿಕೊಳ್ಳಲಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– I was not in power.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನೀವು ಇದ್ದವರು. ಮಾನ್ಯ ಅಧ್ಯಕ್ಷರೆ, power purchase ಮಾಡಿರುವುದು ಇವರ ಕಾಲದಲ್ಲಿ ಪ್ರಾರಂಭವಾದದ್ದು. 2006–07ರಿಂದ ಪ್ರಾರಂಭವಾಗಿರತಕ್ಕಂಥದ್ದು. ಆದ್ದರಿಂದ, ಕುಮಾರಸ್ವಾಮಿಯವರು ಹೇಳಿರತಕ್ಕಂಥದ್ದು 2006–07ರಿಂದ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಕುಮಾರಸ್ವಾಮಿಯವರೆ, ನೋಡಿ, 15 ವರ್ಷಗಳಿಂದ ಮಾಡುವುದಕ್ಕಾಗುವುದಿಲ್ಲ. 2006–07ರಿಂದ ಮಾಡುತ್ತೇವೆ. ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಇವರೇನೋ ತಕರಾರು ಕುಳಿತುಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಇವರೇನೋ ತಪ್ಪು ಮಾಡಿಬಿಟ್ಟಿದ್ದಾರೆ. ಅದಕ್ಕೆ ಪಾಪ ಈ ತರಹ ಆಡುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇದಕ್ಕೆ ನಮ್ಮ ವಿರೋಧವಿದೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಆಗಮಿಸಿದರು)

ಶ್ರೀ ಸಿದ್ದರಾಮಯ್ಯ:– ನೀವು ಪ್ರಾಮಾಣಿಕವಾಗಿದ್ದರೆ ಏಕೆ ಹೆದರಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಇವರೇನೋ ತಪ್ಪು ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– We are not agreeable.

(ಗೊಂದಲ)

ಶ್ರೀ ಸಿದ್ದರಾಮಯ್ಯ:– For every demand we cannot agree.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾವು ಸದನ ಸಮಿತಿ ಮಾಡುವುದಾದರೆ, 2006–07ರಿಂದ ಮಾಡುತ್ತೇವೆ. ಅವರು ಒಪ್ಪಿಕೊಂಡರೆ ಸರಿ. ಒಪ್ಪಿಕೊಳ್ಳದಿದ್ದರೆ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಆಗ ನೀವೇನು ಮಾಡುತ್ತಿದ್ದಿರಿ? ವಿರೋಧಪಕ್ಷದಲ್ಲಿದ್ದಾಗ ಕಡ್ಲೆಪುರಿ ತಿನ್ನುತ್ತಿದ್ದಿರೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು):– ನಾವು ಮಾಡುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾಡುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಿಮಗೆ ಹೆದರಿಕೆ ಏಕೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನನಗೆ ಇಲ್ಲಿಯವರೆಗೆ ಅನುಮಾನವಿರಲಿಲ್ಲ. ಇವರು ಈ ತರಹ ಮಾಡಿದಮೇಲೆ ಅನುಮಾನ ಶುರುವಾಗಿಬಿಟ್ಟಿದೆ. ಇವರೇನೋ ಗೋಲ್‌ಮಾಲ್ ಮಾಡಿದ್ದಾರೆಂದು.....

(ಗೊಂದಲ)

ಶ್ರೀ ಸಿದ್ದರಾಮಯ್ಯ:– 1947ರಿಂದ ಮಾಡುತ್ತಾರೆಯೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನೀವೇನು ಮಾತನಾಡುತ್ತೀರಿ? ಯಾರಾದರೂ ಹಾಗೆ ಮಾತನಾಡುತ್ತಾರೆಯೇ? 1947ರಿಂದ ಮಾಡಿ ಎಂದು ಕೇಳುವುದಕ್ಕಾಗುತ್ತದೆಯೋ? ಕಾಂಗ್ರೆಸ್ ಸರ್ಕಾರ 1947ರಿಂದ ಇದೆ. ಮಾಡುವುದೇ? ಇವರೇನು ಕೇಳುತ್ತಿದ್ದಾರೆ? 1947ರಿಂದ ಕಾಂಗ್ರೆಸ್ ಸರ್ಕಾರ ಇದೆ. ಯಾರಾದರೂ ಮಾಡುತ್ತಾ ಕುಳಿತುಕೊಳ್ಳುತ್ತಾರೆಯೇ?

(ಗೊಂದಲ)

ಅಧ್ಯಕ್ಷರು:– ನೀವು ಒಳಗಡೆ ನಿಂತು ಮಾತನಾಡಿದ್ದು ಯಾವುದೂ recordಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– 2006–07ನೇ ಸಾಲು ಎಂದು ಮಾನ್ಯ ಮುಖ್ಯಮಂತ್ರಿಯವರು announce ಮಾಡಿದ್ದಾರೆ. 2006–07ರಲ್ಲಿ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದರು. ನಾವು ಅದನ್ನು ಸ್ವಾಗತ ಮಾಡಿದ್ದೇವೆ. ಹಾಗೆಯೇ ಬಿಜೆಪಿಯವರು ಸ್ವಾಗತ ಮಾಡಬೇಕು.

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಇದು ಪ್ರಾರಂಭವಾದದ್ದು ಹೇಗೆ? ಕುಮಾರಸ್ವಾಮಿಯವರು ಮಾತನಾಡುವ ವೇಳೆಗೆ 2006–07ರಲ್ಲಿ ಕೋಟಿ ರೂಪಾಯಿಗಳಿತ್ತು. 2007–08ರಲ್ಲೂ ಅದು ಹಾಗೇ ಇತ್ತು. ಆನಂತರ, ಒಂದೇ ಸಾರಿ ಜಾಸ್ತಿಯಾಯಿತು ಎಂದರು. ಮಧ್ಯೆ ನಾನು ಪ್ರವೇಶ ಮಾಡಿದೆ. ಈ ವಿಷಯ ಚರ್ಚೆಗೆ ಗ್ರಾಸವಾಗಿದ್ದೇ 28 ಕೋಟಿ ರೂಪಾಯಿಗಳಿಂದ 1,060 ಕೋಟಿ ರೂಪಾಯಿಗಳಿಗೆ ಹೋದದ್ದಕ್ಕೆ. ಆದ್ದರಿಂದ ಆ period ಅನ್ನು ಮಾಡಿ ಎಂದು ಹೇಳಿದ್ದೇವೆಯೇ ಹೊರತು ಈ 15 ವರ್ಷದ್ದು, 20 ವರ್ಷದ್ದು ಏತಕ್ಕೆ? Issue ಏನು? The step raise in purchase was from 2007 onwards.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ):– ರಮೇಶ್‌ಕುಮಾರ್‌ರವರೆ, ಅವರು ಹೇಳಿದರು. ಅವತ್ತು ನಾನೇನು ಹೇಳಿದೆ? ತಾವೂ ಇಲ್ಲಿ ಸದನದಲ್ಲಿದ್ದಿರಿ. ನಾನು ಅವತ್ತೇನು ಹೇಳಿದೆ? ಕುಮಾರಸ್ವಾಮಿಯವರು raise ಮಾಡಿದಾಗ, ಅವತ್ತು ಏನೇನು purchase

ಆಗಿದೆ, materials purchase, ಎಲ್ಲವೂ enquiry ಆಗಲಿ, CBI enquiry ಆಗಲಿ... ರಮೇಶ್‌ಕುಮಾರ್‌ರವರೆ, ನಾನು ಅವತ್ತು ಹೇಳಿದ್ದು, ನೀವೂ ನನ್ನ ಹೇಳಿಕೆಯನ್ನು ಗಮನಿಸಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ನಾನು ಹೇಳಿದೆ, CBI ತನಿಖೆಗೂ ready ಇದ್ದೇವೆ, ಎಲ್ಲದಕ್ಕೂ ready ಇದ್ದೇವೆ, ಲೋಕಾಯುಕ್ತ, ಯಾವ condition ಮೇಲೆ? 15–20 ವರ್ಷದ್ದು ತನಿಖೆ ಮಾಡಿ. ಯಾವ್ಯಾವವುರು purchase ಆಗಿವೆ? ಅವರು refer ಮಾಡಿದರು. ಅವತ್ತು ನಾನೇನು ಹೇಳಿದೆ, ನಾವು ಎಲ್ಲದಕ್ಕೂ ready ಆಗಿದ್ದೇವೆ, ಯಾವಾಗ ಹಿಂದಿನ ಸರ್ಕಾರದಲ್ಲಿ ಏನೇನು ಆಗಿದೆ ಗೊತ್ತಿಲ್ಲ, ಎಲ್ಲವೂ ಹೊರಗೆ ಬರಲಿ, 15–20 ವರ್ಷ ಯಾವ್ಯಾವುವು, power purchase ಆಗಲಿ, coal purchase ಆಗಲಿ, materials purchase ಆಗಲಿ, ಯಾವ್ಯಾವುವು ಆಗಿವೆ ಎಲ್ಲವೂ ಹೊರಗೆ ಬರಲಿ, ಅದಕ್ಕೆ ಸದನ ಸಮಿತಿಗೆ ನಾನೂ ಒಪ್ಪಿಕೊಂಡೆ. 15–20 ವರ್ಷ. ನಾವು condition ಹಾಕಿದ್ದು 15–20 ವರ್ಷ ಎಂದು ನಾನು ಹೇಳಿದೆ. ಅದನ್ನು ಬಿಟ್ಟು, ಈಗ ಬೇರೆ ರೀತಿಯಾದಂಥದ್ದು. ಕುಮಾರಸ್ವಾಮಿಯವರು ಇಲ್ಲಿಯವರೆಗೆ ನೀವು ಭಾಷಣ ತೆಗೆದುಕೊಳ್ಳಿ, ಯಾವುದೋ specific ಆಗಿ allegation ಏನೂ ಅವರು ಮಾಡಲಿಲ್ಲ. ಎಲ್ಲಾ ಒಟ್ಟಾಗಿ ಮಾಡಿದರು. Specific allegation ಏನೂ ಅವರು ಮಾಡಲಿಲ್ಲ. ಯಾರ ಮೇಲೂ ಮಾಡಲಿಲ್ಲ. ಆದರೂ ನಾವು ಒಪ್ಪಿಕೊಂಡಿದ್ದೇವೆ. ತನಿಖೆ ಮಾಡಿ. ನಾವು ಒಂದೇ ಒಂದು condition ಹಾಕಿದ್ದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ):– ರಮೇಶ್‌ಕುಮಾರ್‌ರವರೆ, ತಾವು ಹಿರಿಯರಿದ್ದೀರಿ. ಇಲ್ಲಿ ಅನುಭವ ಇದ್ದವರಿದ್ದೀರಿ. ಅವತ್ತು ನಾನು ಹೇಳಿದ್ದು....

ಅಧ್ಯಕ್ಷರು:– ಶೆಟ್ಟರ್ ಏನು ಹೇಳಿದರು ಆ ಸಂದರ್ಭದಲ್ಲಿ ಎಂದು ನೋಡಿ.

ಶ್ರೀ ಜಗದೀಶ್ ಶೆಟ್ಟರ್:– Statement ಇದೆ. ದಾಖಲೆ ತೆಗೆದು ನೋಡಿ. 15–20 ವರ್ಷ ಯಾವುದೇ ಸರ್ಕಾರ ಇರಲಿ, ಏನೇನು purchases ಆಗಿದೆ, ಅದರ ಬಗ್ಗೆ ತನಿಖೆ ಮಾಡಲಿಕ್ಕೆ ನನ್ನ ಒಪ್ಪಿಗೆ ಇದೆ. CBI ತನಿಖೆಯಾಗಲಿ, ಲೋಕಾಯುಕ್ತ ತನಿಖೆಯಾಗಲಿ, ಯಾವುದೇ ನ್ಯಾಯಾಂಗ ತನಿಖೆಯಾಗಲಿ ಎಲ್ಲದಕ್ಕೂ ready ಇದ್ದೇನೆ ಎನ್ನುವ ಮಾತನ್ನು ಏಕೆ ಹೇಳಿದೆ, 15–20 ವರ್ಷದ್ದು ಮಾಡಿ ಎಂದು ಹೇಳಿದೆ. ಈಗ ಇದನ್ನು plate ಉಲ್ಟಾ ಮಾಡಿ ಇದಕ್ಕೆ specific ಆಗಿ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರು ಅಷ್ಟಕ್ಕೆ ಎಂದು ಹೇಳಿ, ಅಂದರೆ ಹಿಂದಿನ ಸರ್ಕಾರಗಳ ಏನೇನು ರಾಡಿ ಇವೆಯೋ ಅದನ್ನು ಮುಚ್ಚಿಕೊಳ್ಳುವಂಥ ಕೆಲಸ ನಡೆಯುತ್ತಿದೆ, ಅದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಮಾಡುವುದಾದರೆ 15–20 ವರ್ಷದ್ದು ತನಿಖೆ ಮಾಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ, ಹೇಳಲಿಲ್ಲವೆಂದು ನಾವು ಹೇಳುತ್ತಿಲ್ಲ. ನೀವು ಹೇಳಿದ್ದು ನಿಜ. ನಾನೇನು ಹೇಳುತ್ತಿದ್ದೇನೆಂದರೆ, ಈ ವಿಚಾರ ಚರ್ಚೆಗೆ ಏಕೆ ಬಂತು ಎಂದರೆ, ಮಾನ್ಯ ಕುಮಾರಸ್ವಾಮಿಯವರು purchases ವಿಚಾರಕ್ಕೆ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ):– ಅವರು ಬೇಡಿಕೆ ಏನು ಇಟ್ಟಿದ್ದರು? ಕುಮಾರಸ್ವಾಮಿಯವರು last ಗೇ ಬೇಡಿಕೆ ಏನು ಇಟ್ಟಿದ್ದರು?

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಬೋಪಯ್ಯನವರೆ, you are a former Speaker, ದಯಮಾಡಿ ಬಾವಿಯಲ್ಲಿ ನಿಂತು ಮಾತನಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ):– ಕುಮಾರಸ್ವಾಮಿಯವರ ಬೇಡಿಕೆ ಕೊನೆಗೆ ಏನಿತ್ತು? ಅವರು 15–20 ವರ್ಷದ ಬೇಡಿಕೆ ಇಟ್ಟಿದ್ದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಜಗದೀಶ್ ಶೆಟ್ಟರ್‌ರವರೆ, ತಾವು ತಮ್ಮ ಸ್ಥಾನದಿಂದ ಹೇಳಿದ್ದೆಲ್ಲ ಕಡತಕ್ಕೆ ಹೋಗಿದೆ.

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ):– ಆದರೆ ಅದರ interpretation ಬೇರೆ ಬೇರೆ ರೀತಿಯಲ್ಲಿ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– Please hear me, give me an opportunity.

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ):– You are a good Advocate. Pleading the bad case. ಆದರೆ, ಕುಮಾರಸ್ವಾಮಿಯವರು ಕೊನೆಗೆ ಏನು ಮಾಡಿದರು? Demand ಇಟ್ಟಿದ್ದು 15–20 ವರ್ಷ....

ಶ್ರೀ ಕೆ.ಆರ್. ರಮೇಶ್‌ಕುಮಾರ್:– If you hear me, you can say whether I have a case or not. Let me make it very very clear to you. I have no clients, I am not an Advocate. Let it be very very clear. ಇಲ್ಲಿ ಚರ್ಚೆ ಏಕೆ ಪ್ರಾರಂಭವಾಯಿತೆಂದರೆ, ಅವರು ಆ ವಿಷಯವನ್ನು ಪ್ರಸ್ತಾಪ ಮಾಡಿದ್ದರಿಂದ. ನೀವು ಹೇಳಿದ್ದೆಲ್ಲ ನಿಜವೇ. ಯಾವ enquiryಗೂ ನಾವು ಸಿದ್ಧವಿದ್ದೇವೆ, ಎಲ್ಲವನ್ನೂ ತೆಗೆದುಕೊಳ್ಳಿ ಎಂದು ನೀವು ಹೇಳಿದಿರಿ. ಇಲ್ಲವೆಂದು ನಾವು ಹೇಳುತ್ತಿಲ್ಲ. ಈ ವಿಚಾರ ಚರ್ಚೆಗೆ ಬಂತು ಅದಕ್ಕೆ ಸದನ ಸಮಿತಿ ಮಾಡುತ್ತೇವೆ ಎಂದು ಹೆಳಿ ಅವರು ಬಂದಿದ್ದಾರೆ. ಈಗ ನಿಮ್ಮ demand ಎಲ್ಲವನ್ನೂ ಸೇರಿಸಿ ಮಾಡಿ ಎಂದಿದೆ. ನಮಗೇನೂ ಆಕ್ಷೇಪಣೆ ಇಲ್ಲ. ಬೇಕಾದರೆ, assemblyಯನ್ನು adjourn ಮಾಡಿಬಿಟ್ಟು ಸದನ ಸಮಿತಿಯನ್ನೇ ಮಾಡೋಣವೆಂದರೆ ನಾಳೆಯಿಂದ ಮಾಡಿ. Let not issues be lost sight of. I am not Lawyer. I have never gone to a Court. I have never helped for

any client. I don't plead. I won't be urged. Let there be very very clear definiteon about it. ನಾನು ತಮ್ಮಲ್ಲಿ ಕೇಳತಕ್ಕಂಥದ್ದು ತಮ್ಮ ಮುಖಾಂತರ ನಾನು ನಿನ್ನೆ ಹೇಳಿದ್ದೂ ಕೂಡ, ಅದು ಈ ಸದನದ ವಸ್ತುವಾಗಿದೆ. 28 ಕೋಟಿ.ರೂ.ಗಳಿಂದ ಅಷ್ಟು ದೊಡ್ಡ ಪ್ರಮಾಣದ ಖರೀದಿಯಾಗಬೇಕಾಗಿದ್ದರೆ ಕಾರಣಗಳೇನಿತ್ತು? ಈ ಸದನದ ಸದಸ್ಯರಾಗಿ ತಿಳಿದುಕೊಳ್ಳುವ ಹಕ್ಕು ನಮಗಿದೆ. Enquiries ಬಗ್ಗೆಯೂ ನಾನು ಹೇಳಿದ್ದೇನೆ. ವಿ.ಪಿ. ಮುದ್ಗಲ್‌ರಿಂದ ಹಿಡಿದು ತುಲ್‌ಮೋಹನ್ ರಾಂರಿಂದ ಹಿಡಿದು ಪ್ರತಾಪ್‌ಸಿಂಗ್ ಖೈರೋನ್‌ರಿಂದ ಹಿಡಿದು ಎಲ್ಲ ವಿಚಾರ ಈ ದೇಶದಲ್ಲಿ ಯಾವ್ಯಾವ enquiry ಏನೇನಾಗಿದೆ ಎಂದೂ ಹೇಳಿದ್ದೇನೆ. ಈಗ ನೀವು ಹೇಳಿದ ಯಾವ ಮಾತನ್ನೂ ಹೇಳಲಿಲ್ಲ ಎಂದು ಹೇಳುತ್ತಿಲ್ಲ. ಹೊಸದಾಗಿ ಏನೂ ಹೇಳುತ್ತಿಲ್ಲ. ಆದರೂ Chief Minister has to take a decision. Whether the scope of enquiry should cover all the things including what the Hon'ble Leader of Opposition is saying or should it get confined to what the Hon'ble Member, Mr.Kumaraswamy has raised? He has to make the decision. ಅದಕ್ಕೆ ಅವರ turn ಆಯಿತು. ಅವರು ಹೋಗಿದ್ದಾರೆ. ನಮ್ಮ concern ಏನೆಂದರೆ, ನಿನ್ನೆ BAC ಯಲ್ಲಿ ಏನು decision ತೆಗೆದುಕೊಂಡೆವು? Question hour ಬೇಡ, ಬೇರೆ notices lapse ಮಾಡೋಣ, ಎಲ್ಲಾ demands ಅನ್ನು close ಮಾಡಿಕೊಳ್ಳೋಣ, discussions ಆಗಲಿ, 30th ಅಷ್ಟು ಹೊತ್ತಿಗೆ Appropriation Bill pass ಆಗಬೇಕು. ನಮ್ಮ appeal ಈಗಲೂ ಕೂಡ ನೀವು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಲಿ ಅಥವಾ match fixing ಅದು ಇದು... ಯಾರ್ಯಾರು players, match fixing ಎಂದು ನಮಗೆ ಹೇಗೆ ಗೊತ್ತಾಗುತ್ತದೆ? We are only umpires. We are not players. ನಾವು umpires ಎಂದರೆ ನಾವು fixed umpires ಅಲ್ಲ. very judicious umpires. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಸದನದ proceedings ಮುಂದೆ ಹೋಗುವುದಕ್ಕೆ, ತಾವು ಏನಿದೆಯೋ ಅದನ್ನು ತಮ್ಮ ಸೀಟ್‌ನಿಂದ ಹೇಳಿ. ಮಾನ್ಯ ಮುಖ್ಯಮಂತ್ರಿಯವರು let him take a decision. ತಾವು ಹೇಳಿದ್ದನ್ನು cover

ಮಾಡಿ enwuiry ಗೆ order ಮಾಡುತ್ತಾರೋ ಅಥವಾ ಕುಮಾರಸ್ವಾಮಿಯವರು ಹೇಳಿದ್ದಕ್ಕೆ ಸ್ಥಗಿತಗೊಳಿಸುತ್ತಾರೋ ಗೊತ್ತಾಗುತ್ತದೆ. ಸದನ ನಿಲ್ಲಿಸುವುದು ಬೇಡ ನಾನು ತಮ್ಮಲ್ಲಿ appeal ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– (ತಮ್ಮ ಸ್ಥಾನದಿಂದ):– ಮಾನ್ಯ ಅಧ್ಯಕ್ಷರೆ, ಇದು clarify ಆಗಬೇಕಾಗಿದೆ. ನಿನ್ನೆ ನಾನು ಮಾತನಾಡುವಂಥ ಸಂದರ್ಭದಲ್ಲಿ ಎಲ್ಲಾ ತನಿಖೆಗೂ ನಾವು ತಯಾರಿದ್ದೇವೆ ಎನ್ನುವಂಥ ಮಾತನ್ನು ಹೇಳಿದ್ದೇನೆ. ಅದರಲ್ಲಿ 15–20 ವರ್ಷ ಹಿಂದಿನ ಸರ್ಕಾರಗಳು ಇದ್ದಾಗ ಯಾವ್ಯಾವ ಸರ್ಕಾರ ಇರಲಿ, ಅದೂ ಸಹಿತ ತನಿಖೆಯಾಗಬೇಕು, all purchases ಎನ್ನುವಂಥ ಮಾತನ್ನು ಸ್ಪಷ್ಟವಾಗಿ ನಾನು ಹೇಳಿದೆ. ಅದೇ condition ಮೇಲೆ ತನಿಖೆ ಆಗಲಿ ಎನ್ನುವಂಥದ್ದು ಒಬ್ಬ ವಿರೋಧ ಪಕ್ಷದ ನಾಯಕನಾಗಿ ನಾನು ಇಲ್ಲಿ ಒಪ್ಪಿಕೊಂಡಿದ್ದು. ಅದಕ್ಕೆ ಇವತ್ತು ಮಾನ್ಯ ಮಂತ್ರಿಯವರು ಸ್ಪಂದನೆ ಮಾಡಬೇಕು. ಅದನ್ನೂ ಬೇಡವೆನ್ನುವಂಥ ಮಾತನ್ನು ಹೇಳಿದರು. ಸದನ ಸಮಿತಿಯಾದರೂ ಮಾಡಿ, ಯಾವುದಾದರೂ enquiry ಮಾಡಿ. ಆದರೆ, ನಮ್ಮದು demand ಇದೆ, ಕುಮಾರಸ್ವಾಮಿಯವರದ್ದೂ ಕೊನೆಯದಾದ ಒಂದು ಅವರೇನು demand ಇಟ್ಟರು, lastಗೆ 15–20 ವರ್ಷದ ಏನೇನು ಘಟನೆಗಳಾಗಿವೆ, ಏನೇನು purchases ಆಗಿವೆ ಎಲ್ಲವೂ ತನಿಖೆಯಾಗಲಿ ಎನ್ನುವಂಥದ್ದನ್ನೂ ಅವರೂ demand ಇಟ್ಟಿದ್ದಾರೆ. ನಾನೂ ಅದೇ demand ಇಟ್ಟಿದ್ದೇನೆ. ಇವರು ಅದಕ್ಕೆ 2006–07 ಕ್ಕೆ ಸೀಮಿತಿವಾಗಿ ಮಾಡುವಂಥದ್ದು ಬೇಕಾಗಿಲ್ಲ. ಹಿಂದಿನ ಸರ್ಕಾರ ಯಾರೂ ತಪ್ಪು ಮಾಡಿಲ್ಲವೆಂದರೆ ಯಾರೂ ಹೆದರಬೇಕಾಗಿಲ್ಲ. ನನಗೂ ಗೊತ್ತಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ನಾವು ಯಾವುದೂ ತಪ್ಪು ಮಾಡಿಲ್ಲ. KREC ಇರುತ್ತದೆ. Authority ಇರುತ್ತದೆ. ಅವರೇನು, ಯಾವುದೇ purchases ಆಗಲಿ, ಮತ್ತೊಂದಾಗಲಿ ಎಲ್ಲದಕ್ಕೂ ಅವರ ಒಪ್ಪಿಗೆ ತೆಗೆದುಕೊಂಡೇ ನಾವು ಮಾಡಬೇಕಾಗಿದೆ. ಎಲ್ಲವೂ ಕಾನೂನು ಬದ್ಧವಾಗಿ ನಮ್ಮ ಸರ್ಕಾರದ ಅವಧಿಯಲ್ಲಿ ಮಾಡಿರುವುದು. ಇದರಲ್ಲಿ ಯಾವುದೇ ತಪ್ಪಿಲ್ಲ. ಆದರೂ ತನಿಖೆಯಾಗಬೇಕೆಂದಾಗ ಅದಕ್ಕೆ

ತಯಾರಿದ್ದೇವೆ. ಯಾವ ಕಾರಣದ ಮೇಲೆ ತಯಾರಾಗಿದ್ದೇವೆ, 15–20 ವರ್ಷಗಳಿಂದ ಹಿಂದಿನ ಸರ್ಕಾರದಲ್ಲಿ ಕೆಲವು ಏನು ಘಟನೆಗಳಾಗಿವೆ, purchases ಇವೆ, ಅದರಲ್ಲಿ coal ಇರಬಹುದು, materials purchase ಇರಬಹುದು, ಎಲ್ಲವೂ ತನಿಖೆಯಾಗಲಿ ಎನ್ನುವುದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದು. ಯಾವುದೇ ತನಿಖೆಗೂ ನಾವು ತಯಾರಾಗಿದ್ದೇವೆ. ಇದನ್ನು ಮತ್ತೆ ತಿರುಚಿ ಕೇವಲ 2006–07 ಎನ್ನುವಂಥ restriction ಹಾಕುವುದು ಬೇಡ. ಕುಮಾರಸ್ವಾಮಿಯವರು ಮಾತನಾಡುವಾಗಲೂ 15–20 ವರ್ಷಗಳೆಂದು ಹೇಳಿದ್ದಾರೆ. ನಾನು ಮಾತನಾಡುವಾಗಲೂ 15–20 ವರ್ಷಗಳೆಂದು ಹೇಳಿದ್ದೇನೆ. ನಾವು ಯಾರೂ ತಪ್ಪು ಮಾಡಿಲ್ಲ. ಆದರೆ, ಸಾರ್ವಜನಿಕವಾಗಿ ತಪ್ಪು ಭಾವನೆಗಳು ಹೋಗುತ್ತಿವೆ. ಇಲ್ಲಿ ಏನೋ ಆಗಿದೆ ಎನ್ನುವ ವಾತಾವರಣ ಇರುವುದರಿಂದ ಅದು clear ಆಗಲಿ ಎನ್ನುವ ದೃಷ್ಟಿಯಿಂದ ನಾನು bonafide ಆಗಿ ಒಪ್ಪಿದ್ದು. ನೀವು ತಪ್ಪು ಮಾಡಿಲ್ಲ ಎಂಬುದು ನಿಮಗೆ ಇದ್ದರೆ ಯಾರು ಹೆದರುವಂಥ ಕಾರಣವಿಲ್ಲ. ಹೀಗಾಗಿ ಸರ್ಕಾರ ಮಾಡಿದಂಥವರು ಯಾರು ಇದ್ದಾರೆ ಅವರ್ಯಾರು ತಪ್ಪು ಮಾಡಿಲ್ಲವೆಂದರೆ ಈ ಸದನ ಸಮಿತಿಗೆ ಹೆದರುವ ಕಾರಣವಿಲ್ಲ, enquiry ಅಗಲಿ, thorough enquiry ಆಗಲಿ. 28 ಕೋಟಿ ರೂಪಾಯಿಯ purchase ಎಂದು ಬರೀ ಒಂದು subject ಇಟ್ಟುಕೊಂಡು ಹೇಗೆ ತನಿಖೆ ಮಾಡುತ್ತೀರಿ? ಆಮೂಲಾಗ್ರವಾಗಿ ಒಂದು ಸಲ ತನಿಖೆಯಾಗಲಿ. ಆ ಇಂಧನ ಇಲಾಖೆಯ ಬಗ್ಗೆ ಆಮೂಲಾಗ್ರವಾಗಿ ತನಿಖೆಯಾಗಿ ಯಾವ ರೀತಿ system ಇರಬೇಕೆನ್ನುವಂಥದ್ದರ ಬಗ್ಗೆ ಆ ಸದನ ಸಮಿತಿ guidelines fix ಮಾಡಲಿ. ಎಲ್ಲರಿಗೂ ಒಂದು ಮಾರ್ಗದರ್ಶನವಾಗುತ್ತದೆ. ಎಲ್ಲರಿಗೂ ಒಳ್ಳೆಯದಾಗುತ್ತದೆ. ಕೇವಲ ಒಂದೇ ಒಂದು ಇಶ್ಯೂ ಆದರೆ, ಯಾರೋಬ್ಬರನ್ನು ಅಧಿಕಾರಿಯನ್ನು ತನಿಖೆ ಮಾಡಬಹುದಾಗಿತ್ತು. ಆದರೆ, ಈ ರೀತಿಯಾದ ಒಂದು ಸದನ ಸಮಿತಿ, ಇಡೀ ಸದನವೇ ಒಂದು ಸಮಿತಿಯನ್ನು ಮಾಡಿಕೊಂಡು ನೀವು enquiry ಮಾಡುವಾಗ ಒಂದು broad base ಕೊಡಿ. ಇಡೀ ಇಂಧನ ಇಲಾಖೆಯಲ್ಲಿ ಏನು ಅಸ್ಥವ್ಯಸ್ಥ ಇದೆ, ಏನಾಗುತ್ತದೆ,

purchase ಇರಬಹುದು ಮತ್ತೊಂದು ಇರಬಹುದು, ಅದಕ್ಕೊಂದು ಮಾರ್ಗದರ್ಶನ ಮಾಡುವ ರೀತಿಯಲ್ಲಿ ಆ ಸದನ ಸಮಿತಿ ಇರಲಿ. ಅದಕ್ಕೊಂದು guidance ಆಗಲಿ. ಎಲ್ಲರಿಗೂ ಮಾರ್ಗದರ್ಶನ ಇರಲಿ. ಇದೇ opportunity ತೆಗೆದುಕೊಂಡು ಆ ರೀತಿಯಾದ broad base ಇರುವಂಥದ್ದನ್ನು ಮಾಡಿದರೆ ಅದು ಎಲ್ಲರಿಗೂ ಒಳ್ಳೆಯದಾಗುತ್ತದೆ. ಎಲ್ಲರಿಗೂ ಮಾರ್ಗದರ್ಶನವಾಗುತ್ತದೆ. ಆ ರೀತಿಯಾದ ಚಿಂತನೆ ಮಾಡಿದರೆ ಒಳ್ಳೆಯದು. ಕೇವಲ limited ಒಂದೇ ಒಂದು event, ಒಂದೇ ಒಂದು purchase, ಇದನ್ನು ನೀವು ಮಾಡಿದರೆ ಇದರಲ್ಲಿ ಏನಾಗುತ್ತದೆ ರಾಜಕಾರಣ ಮಾಡುತ್ತಿದ್ದೀರಿ ಎಂದು ನಮಗೆ ಅನ್ನಿಸುತ್ತದೆ. ಅದಕ್ಕಾಗಿ ನಮ್ಮದು ಇದಕ್ಕೆ ವಿರೋಧವಿದೆ. ಒಂದೇ ಒಂದು ಮಾತು ಏನೆಂದರೆ, 15–20 ವರ್ಷಗಳಿಂದ ನೀವು ಯಾವುದೇ ತನಿಖೆ ಮಾಡಿ. ಸದನ ಸಮಿತಿಯಾಗಲಿ, CBI ಆಗಲಿ, ಲೋಕಾಯುಕ್ತ ಆಗಲಿ, ಎಲ್ಲದಕ್ಕೂ ನಾವು ರೆಡಿ ಇದ್ದೇವೆ. ಆದರೆ, ನಮ್ಮದು ಒಂದೇ ಒಂದು ಕಂಡೀಷನ್ 15–20 ವರ್ಷದ್ದು ಮಾಡಿ. ಎಲ್ಲದಕ್ಕೂ ರೆಡಿ ಇದ್ದೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಈ ದೇಶದಲ್ಲಿ court ಗೆ police ಗೆ ಇದಕ್ಕೆಲ್ಲ ಭಯ ಪಡುವವರು ಮಾನಸ್ಥರು ಮಾತ್ರ. ಎಲ್ಲಾ ಮೂರು ಬಿಟ್ಟವರು ಎಲ್ಲಾ ತಪ್ಪು ಮಾಡಿದವರು ಯಾರಿಗೂ ಹೆದರುವುದಿಲ್ಲ. Don't care any enquiryಗೆ ready ಎನ್ನುತ್ತಾರೆ. ನಮಗೇನು ಇಲ್ಲ. ಯಾರು ಮಾನಸ್ಥರು ಇದ್ದರೆ ಅವರಿಗೆ ನಾನು ಹೇಳಿದ್ದು apply ಆಗುತ್ತದೆ. ಯಾರು ಮಾನ ಬಿಟ್ಟವರು ಇದ್ದರೆ ಅವರೆಲ್ಲ ಹೆದರುವುದಿಲ್ಲ don't care masters ಧೈರ್ಯಸ್ಥರು ಎಂದು ಹೇಳುತ್ತೇವೆ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ವಿಷಯ ಹೇಗೆ ಉದ್ಭವವಾಯಿತು ಎಂದರೆ, ಒಂದು ಹಂತದಲ್ಲಿ 28 ಕೋಟಿ ರೂಪಾಯಿಗೆ ಖರೀದಿ ಮಾಡುತ್ತಿದ್ದೆವು, ಅದು ಮುಂದಿನ ವರ್ಷಗಳಲ್ಲಿ ಹೆಚ್ಚಿಗೆ

ಹೊರಟು ಹೋಗಿದೆ, ಇದಕ್ಕೆ ಕಾರಣ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಸದನ ಸಮಿತಿ ಬೇಕೆಂದು ಸಲಹೆ ಕೊಟ್ಟರು.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಅದಕ್ಕೊಂದು ಸದನ ಸಮಿತಿ ಬೇಕೆ. ಅದನ್ನು ಯಾರಾದರೂ ನೋಡಿದರೆ ಗೊತ್ತಾಗುತ್ತದೆ. ಅದು ಆಮೂಲಾಗ್ರವಾಗಿ ತನಿಖೆಯಾಗಬೇಕೆಂದರೆ ಎಲ್ಲವೂ ಕೂಲಂಕಷವಾಗಿ ತನಿಖೆಯಾಗಬೇಕು. ಅಷ್ಟಕ್ಕೆ ಸದನ ಸಮಿತಿ ಬೇಕೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನೀವೆ ಚಿಂತನೆ ಮಾಡಿ. ನೀವೇ ವೈಜ್ಞಾನಿಕವಾಗಿ ಚಿಂತನೆ ಮಾಡಿ. ನೀವೆ ಅದನ್ನು study ಮಾಡಿ ಹೇಳಿ. ನಿಮಗೆ ಅಧಿಕಾರ ಕೊಡುತ್ತೇವೆ. ನೀವೆ ಸರಿ ನೀವೆ ಕೊಟ್ಟು ಬಿಡಿ. ನಮಗೆ ಮಾನ್ಯ ಕಾಗೋಡು ತಿಮ್ಮಪ್ಪನವರ ಮೇಲೆ ನಂಬಿಕೆ ಇದೆ. ನೀವೆ ಕೊಟ್ಟು ಬಿಡಿ. ಒಂದು ವಿಷಯದ ಬಗ್ಗೆ ಒಂದು ಘಟನೆಯ ಬಗ್ಗೆ ಒಂದು ಇಶ್ಯೂ ಬಗ್ಗೆ ಅಧ್ಯಕ್ಷರೆ ನೀವು ತನಿಖೆ ಮಾಡಿಬಿಡಿ. ಆಮೂಲಾಗ್ರವಾಗಿ ಎಲ್ಲಾ ವಿಷಯಗಳು ಚರ್ಚೆಯಾಗಲಿ ಎನ್ನುವ ದೃಷ್ಟಿಯಿಂದಲೇ ನಾವು ಒಪ್ಪಿರುವುದು, ಕೇವಲ ಒಂದು ಘಟನೆ ಅಧ್ಯಕ್ಷರೆ ನೀವು ತನಿಖೆ ಮಾಡಿಬಿಡಿ. ಆಮೂಲಾಗ್ರವಾಗಿ ಎಲ್ಲಾ ವಿಷಯಗಳು ಚರ್ಚೆಯಾಗಲಿ ಎನ್ನುವ ದೃಷ್ಟಿಯಿಂದಲೇ ನಾವು ಒಪ್ಪಿರುವುದು. ಕೇವಲ ಒಂದು ಘಟನೆಯ ಬಗ್ಗೆ ಮಾಡುವುದಾದರೆ, ನಾವು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಅಧಿಕಾರ ಕೊಟ್ಟು ಬಿಡುತ್ತೇವೆ. ಆ ಒಂದು event ಬಗ್ಗೆ ಇಷ್ಟು ಏಕೆ difference ಆಯಿತು ಎಂದು ತಾವೇ study ಮಾಡಿ ನೀವು ಹೇಳಿ ಬಿಡಿ. ನೀವೇ ಒಂದು ruling ಕೊಟ್ಟು ಬಿಡಿ. ಅದಕ್ಕೆ ನಾವು ತಯಾರಿದ್ದೇವೆ. ಅದು ಬಿಟ್ಟು ಒಂದು incidents ಸಲುವಾಗಿ ಸದನ ಸಮಿತಿ ಮಾಡುವುದು ಎಂದರೆ, 15–20 ವರ್ಷಗಳದ್ದು ತನಿಖೆಯಾಗಲಿ. ಎಲ್ಲವೂ ಆಮೂಲಾಗ್ರವಾಗಿ ತನಿಖೆ ಆಗಲಿ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರು ಬಹಳ specific ಆಗಿ ಹೇಳಿದ್ದು 2007–08 ರಲ್ಲಿ power purchase ಮಾಡಿದ್ದು 28 ಕೋಟಿ 51 ಲಕ್ಷ. 2008–09 ಕ್ಕೆ 28 ಕೋಟಿ ಯಿಂದ 1,327 ಕೋಟಿಗೆ ಆಯಿತು. 2009–10 ರಲ್ಲಿ 1,155 ಕೋಟಿ, 2010–11 ರಲ್ಲಿ 3,903 ಕೋಟಿ. 2011–12 ರಲ್ಲಿ 3,325 ಕೋಟಿ. 2012–13 ರಲ್ಲಿ 4,839 ಕೋಟಿ. 28 ಕೋಟಿ ಯಿಂದ 2012–13 ರಲ್ಲಿ 4,839 ಕೋಟಿ 43 ಲಕ್ಷ. 2013–14 ರಲ್ಲಿ ನಾವು ಬಂದ ಮೇಲೆ 3,212 ಕೋಟಿ ಅಂದರೆ 1,600 ಕೋಟಿ ಪುನಃ ಕಡಿಮೆಯಾಯಿತು. ಅದಕ್ಕೆ 28 ಕೋಟಿಯಿಂದ ಇಷ್ಟೊಂದು purchase ಆಗಿದೆಯಲ್ಲ ಇದು ತನಿಖೆಯಾಗಬೇಕೆ ಹೊರತು 20 ವರ್ಷಗಳದ್ದು ತನಿಖೆ ಮಾಡಿ ಎಂದರೆ ಏನರ್ಥ? 15–20 ವರ್ಷಗಳಿಂದ ಯಾರೂ ತನಿಖೆ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇವರು ಪದೇ ಪದೇ ಅದೇ ಹೇಳುತ್ತಿದ್ದಾರೆ. KERC ಯವರು ಒಪ್ಪಿಗೆ ಕೊಟ್ಟ ಮೇಲೆಯೇ ಮಾಡಿರುವುದು. ನಾವೇನು independent ಆಗಿ decision ತೆಗೆದುಕೊಳ್ಳುವುದಕ್ಕಾಗುವುದಿಲ್ಲ. KERC ಯವರು ಇದಕ್ಕೆ ಒಪ್ಪಿಗೆ ಕೊಟ್ಟ ಮೇಲೆ ಮಾಡಿರುವಂಥದ್ದು. 15–20 ವರ್ಷಗಳಿಂದ ಎಲ್ಲವೂ ಏನು purchase ಆಗಿದೆ, ಅದೆಲ್ಲವೂ ಆಗಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– KERC ಒಪ್ಪಿಗೆ ಕೊಟ್ಟ ಮೇಲೆ purchase ಆಗಿರುವುದು ನಾವೇನು ಆ ದಿನ ಸದನದಲ್ಲಿ ಹೇಳಿದ್ದೇವೆ, ಅದು record ನಲ್ಲಿದೆ. ಆ condition ಮೇಲೆಯೇ ನಾವು ಒಪ್ಪಿರುವುದು. ಅದು ಬಿಟ್ಟು ಇವತ್ತು ಈ plate change ಮಾಡುವಂಥದ್ದು ದಯವಿಟ್ಟು ಅದನ್ನು ತಡೆಯಬೇಕು. ಆಗಲೇ ಮಾನ್ಯ ಶಿವಕುಮಾರ್‌ರವರು ಅದನ್ನೆ ಹೇಳಿದರು.

ಮತ್ತೆ ಈಗಲೂ ಅವರು ಅದನ್ನೇ ಹೇಳುತ್ತಿದ್ದಾರೆ. ಎಲ್ಲವೂ ಸಮಗ್ರವಾಗಿ ತನಿಖೆಯಾಗಲಿ.

(ಗೊಂದಲ)

ಅಧ್ಯಕ್ಷರು:– ಯಾವ ವಿಚಾರವಾಗಿ ಸಮಗ್ರವಾಗಿ ಆಗಬೇಕು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Coal purchase ಆಗಿದೆ, materials purchase ಆಗಿದೆ, ಎಲ್ಲವೂ ಆಗಲಿ.

(ಗೊಂದಲ)

ಅಧ್ಯಕ್ಷರು:– ನೋಡಿ misinterpret ಮಾಡಬೇಡಿ. ಅದು ಏನು ಹೇಳಿರುವುದು power purchase ಗೆ ಮಾತ್ರ ಸೀಮಿತವಾಗಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– No, no. ನನ್ನ statement ತೆಗೆದು ನೋಡಿ. ನಾನು ಮಾತನಾಡಿದ್ದೇನೆ, ಸವದಿಯವರು ಮಾತನಾಡಿದ್ದಾರೆ, ಕುಮಾರಸ್ವಾಮಿಯವರು ಮಾತನಾಡಿದ್ದಾರೆ, ನಾವು ಇದರ ಬಗ್ಗೆ ಹೇಳಿದ್ದೇವೆ. ಇದರ ಬಗ್ಗೆ ತನಿಖೆಯಾಗಬೇಕು. ಇದರಲ್ಲಿ misappropriation ಆಗಿದೆ. Coal purchaseನಲ್ಲಿ ಆಗಿದೆ, materials purchase ನಲ್ಲಿ ಆಗಿದೆ, ನಾನು ಕೂಡ ಇದನ್ನೇ insist ಮಾಡಿದ್ದೇನೆ. 15–20 ವರ್ಷಗಳಲ್ಲಿ ಏನೇನು purchase ಆಗಿದೆ ಎಲ್ಲವೂ ತನಿಖೆಯಾಗಲಿ. ಈ ರೀತಿಯ stand ತೆಗೆದುಕೊಳ್ಳುವುದು ಸರಿಯಲ್ಲ. ನಾವೇನು demand ಮಾಡಿದ್ದೇವೆಂದು record ತೆಗೆದು ನೋಡಿ. 15 ವರ್ಷಗಳಿಂದಲೂ ಮಾಡಿ. 15 ವರ್ಷದ್ದು ಆಗಲಿ ಏನಾಗುವುದು ಆಗಿ ಬಿಡಲಿ. ಅವರು ಏನು ತಪ್ಪು ಮಾಡಿಲ್ಲವೆಂದರೆ ಏಕೆ ಹೆದರುವುದು?

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ಅರ್ಧಗಂಟೆಗಳ ಕಾಲ ಮುಂದೂಡಲಾಗುವುದು.

(ಸದನವು 3 ಗಂಟೆ 50 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಅರ್ಧಗಂಟೆಯ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಸಂಜೆ 5 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಭಾವಿಯಲ್ಲಿ ಧರಣಿನಿರತರಾಗಿದ್ದರು)

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ದಯಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕು. ಕಾರ್ಯಕಲಾಪಗಳನ್ನು ಮುಂದುವರೆಸೋಣ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದಲೂ ಅನೇಕ ವಿಚಾರಗಳನ್ನು ದೀರ್ಘವಾಗಿ ಚರ್ಚೆ ಮಾಡಿದ ನಂತರ ಉತ್ತರ ಹೇಳಿ, ನಾನು ಎಲ್ಲ ರೀತಿಯಲ್ಲಿಯೂ ಮನವಿಯನ್ನು ಮಾಡಿಕೊಂಡಿದ್ದೇನೆ. ಈ ರಾಜ್ಯಕ್ಕೆ ಒಳ್ಳೆಯದಾಗಬೇಕು, ಈ ರೀತಿಯೆಲ್ಲಾ ಮಾಡುವುದು ಸರಿಯಲ್ಲವೆಂದು ನಾನು ಹೇಳಿದ್ದೇನೆ. ಆದರೂ ಸಹ ಮಾನ್ಯ ಕುಮಾರಸ್ವಾಮಿಯವರು ಬಹಳ ಒತ್ತಡವನ್ನು ಮಾಡಿದ್ದಾರೆ. ಇವರು ಒಂದು ಕಡೆ ಎಲ್ಲಾ ವಿಚಾರದಲ್ಲಿಯೂ ತೀವ್ರವಾದಂತಹ ತನಿಖೆಯಾಗಬೇಕೆಂಬ ಪ್ರಸ್ತಾವನೆಯನ್ನು ಮಾಡುತ್ತಿದ್ದಾರೆ. ಇದರಲ್ಲಿ ನನ್ನ ಮನವಿ ಏನೆಂದರೆ, ಕಳೆದ 8–10 ವರ್ಷಗಳಿಂದಲೂ ಸದನವು ಇಲಾಖಾ ಬೇಡಿಕೆಗಳ ಚರ್ಚೆಯನ್ನು ನಿಲ್ಲಿಸಲಾಗಿತ್ತು. ಈಗ ಇಲಾಖಾ ಬೇಡಿಕೆಗಳ ಮೇಲೆ ಚೆನ್ನಾಗಿ ಚರ್ಚೆಯಾಗುತ್ತಿದೆ. ಅದು ಈಗ ಸುಗಮವಾಗಿ ಹೋಗಬೇಕು. ಪುನಃ Floor leaders ಅನ್ನು ಕರೆಸಿ, ಮುಖ್ಯಮಂತ್ರಿಗಳು ಮತ್ತು ಎಲ್ಲರೂ ಸೇರಿ ಚರ್ಚೆ

ಮಾಡಿ ಯಾವ ರೀತಿ ಮಾಡೋಣವೆಂದು ತೀರ್ಮಾನ ಮಾಡೋಣ. ಸದ್ಯಕ್ಕೆ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ ಇದನ್ನು ಇಲ್ಲಿಗೆ ಬಿಟ್ಟು ಮುಂದಕ್ಕೆ ಹೋಗಿ ಕಾರ್ಯಕಲಾಪಗಳನ್ನು ನಡೆಸೋಣ.

ಅಧ್ಯಕ್ಷರು:– ಆಯಿತು. ದಯವಿಟ್ಟು ತಮ್ಮ ಸ್ಥಾನಕ್ಕೆ ತೆರಳಿ. ಎಲ್ಲರೂ ಸೇರಿ ಮಾಡೋಣ.

ಶ್ರೀ ಡಿ.ಕೆ. ಶಿವಕುಮಾರ್:– We will take all of you into confidence and look in to that.

(ಈ ಹಂತದಲ್ಲಿ ಭಾರತೀಯ ಜನತ ಪಕ್ಷದ ಸದಸ್ಯರುಗಳು ಬಾವಿಯಿಂದ ಹೊರನಡೆದು ತಮ್ಮ ತಮ್ಮ ಸ್ಥಾನಗಳಿಗೆ ಹೋದರು.)

ಅಧ್ಯಕ್ಷರು:– ಬೋಪಯ್ಯನವರು continue ಮಾಡಿ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ನಾನು ಅರಣ್ಯ ಇಲಾಖೆಯ Organization structure ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಈ ರೀತಿ ಆಯಿತು. IFS Cadre ನ 164 ಹುದ್ದೆಗಳಿದ್ದು, ಅವರೆಲ್ಲರೂ ಇಲಾಖೆಯಲ್ಲಿಯೇ ಇದ್ದಾರೆಯೇ? On deputation ಇದ್ದಾರೆಯೇ? ಅದೆಲ್ಲದರ ಬಗ್ಗೆ ಮಾಹಿತಿಯನ್ನು ಕೊಡಬೇಕು ಮತ್ತು ಇಷ್ಟೂ ಜನರಿಗೆ ಏನು ಕೆಲಸ ಎನ್ನುವ ಮಾಹಿತಿಯೂ ಸಹ ಬೇಕು. ನಮ್ಮ ರಾಜ್ಯದಲ್ಲಿ 13 division ಇದೆ. ಇಷ್ಟು ಜನಕ್ಕೆ ಏನು ಕೆಲಸ? ನಾನು ಆಗಲೇ ಹೇಳಿದ ಹಾಗೆ, ನನ್ನ ಜಿಲ್ಲೆಯಲ್ಲಿ ಇಬ್ಬರು CCF ಇದ್ದಾರೆ. ಅವರಿಗೆ ಇಲ್ಲಿ ಏನು ಕೆಲಸ ಎಂದು ಗೊತ್ತಿಲ್ಲ. ಇದರ ಜೊತೆಗೆ, ಕೆಲವು ಹುದ್ದೆಗಳನ್ನು direct IFS ಯಾರು ಆಗಿರುತ್ತಾರೆ ಅವರಿಗೆ ಕೊಡುತ್ತಾರೆ. ಪಾಪ, ಕರ್ನಾಟಕದಲ್ಲಿ ಯಾರು Ranger ನಿಂದ promotion ಆಗಿ ಬರುತ್ತಾರಲ್ಲ ಅವರಿಗೆ ಇಲ್ಲ. ಅಷ್ಟು ವ್ಯವಸ್ಥೆಯನ್ನು ಈ IFS ಅಧಿಕಾರಿಗಳು ಮಾಡಿಕೊಂಡಿದ್ದಾರೆ. IFS ಎಂದರೆ, I First safe